1011(1401) ಶ್ರೀ ಪ್ರಭಾಕರ ಬಂಗೇರ.ಕೆ(ಬೆಳ್ತಂಗಡಿ) : ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ ಎಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ನಿರ್ಮಲ ನಗರ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಈ ಯೋಜನೆಯ ವಿವರಗಳೇನು; ಈ ಯೋಜನೆಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾದ ವಿವರಗಳೇನು;

ಇ) ನಗರ ಪ್ರದೇಶದ ಬಡ ಜನರಿಗಾಗಿ ಶೌಚಾಲಯ ನಿರ್ಮಾಣ ಕಾರ್ಯಕ್ರಮದ ಪ್ರಗತಿಯ ವಿವರಗಳೇನು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ನಿರ್ಮಲ ನಗರ ಯೋಜನೆಯನ್ನು ರಾಜ್ಯದ ಆಯ್ದ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಆ) ಈ ಯೋಜನೆಯಡಿಯಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಭೂತ ಅಭಿವೃದ್ಧಿ, ಲೆಕ್ಕ ಪತ್ರ ಸುಧಾರಣೆಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಪ್ರಮುಖ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. 57 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೌಗೋಳಿಕ ಮಾಹಿತಿ ಪದ್ದತಿಯ(GIS)ಅನುಸಾರ ಗಣಿಕೀಕರಣ.
2. 43 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲೆಕ್ಕ ಪತ್ರಗಳ ಕುರಿತಂತೆ ನಿಧಿ ಆಧಾರಿತ ಲೆಕ್ಕ ಪದ್ದತಿ (FBAS).
3. 32 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಶೌಚಾಲಯ.
4. 43 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ಸಂಸ್ಕರಣೆ.
5. 52 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಸ್ತ್ರೀ ಶಕ್ತಿ ಯೋಜನೆ.
6. 57 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಳೆ ಕೊಯ್ಲು.

ಇ) ಆಯ್ದ 29 ಪಟ್ಟಣಗಳಲ್ಲಿ 100 ಸಾರ್ವಜನಿಕ ಶೌಚಾಲಯಗಳನ್ನು ಕರ್ನಾಟಕ ಭೂ ಸೇನಾ ನಿಗಮದ ಮೂಲಕ ನಿರ್ವಹಿಸಿಲಾಗುತ್ತಿದ್ದು, ಬಹುತೇಕ ಮುಕ್ತಾಯಗೊಳ್ಳುವ ಹಂತದಲ್ಲಿರುತ್ತದೆ.

1013(1403)ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇಲ್ಲಿಯತನಕ ಕಲಾವಿದ ವರ್ಗಗಳವರಿಗೆ ನೀಡುತ್ತಿರುವ ಮಾಸಾಶನದ ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಇನ್ನೂ ಎಷ್ಟು ಜನರಿಗೆ ಮಾಸಾಶನ ನೀಡಲು ಸರ್ಕಾರ ಕಾರ್ಯಕ್ರಮ ರೂಪಿಸಿದೆ;

ಇ) ವಯೋಮಿತಿಯನ್ನು ಗಣನೆಗೆ ತೆಗೆದುಕೊಂಡು, ಅರ್ಜಿ ಸಲ್ಲಿಸಿ ಕಾಯುತ್ತಿರುವ ಕಲಾವಿದರಿಗೆ ತುರ್ತು ಅದ್ಯತೆಯನ್ನು ನೀಡಿ ಮಾಸಾಶನ ಮಂಜೂರು ಮಾಡಲು ಸರ್ಕಾರ ಕ್ರಮ ಜರುಗಿಸುವುದೇ?